ಶ್ರೀ ಎಲ್. ಶ್ರೀಕಂಠಯ್ಯ.—ಇಷ್ಟಾದರೂ, ತರಾವತಿಯ ಬಗ್ಗೆ, ಖಾದಿ ಬೋರ್ಡಿನ ಬಗ್ಗೆ ಇಷ್ಟೊಂದು ತಿಳಿವಳಿಕೆ ಇದ್ದರೂ ಕೂಡ ತಾವು ವಿಚಾರಣೆ ಮಾಡಿದಿರಾ ?

ಶ್ರೀ ಎಸ್. ನಿಜಲಿಂಗಪ್ಪ.—ಖಾದಿ ಬೋರ್ಡಿನ ಚರಿತ್ರೆ ಬಹಳ ದೊಡ್ಡದು. ಬಹುಶಃ 10-12 ವರ್ಷವಾಗಿದೆ. ಅದರ ರೆಕ್ಕ ಇನ್ನೂ ಪೂರ್ತಿಯಾಗಿಲ್ಲ. ಅದನ್ನು ಬರೆಸಿ, ಬರೆಸಿ ಸಾಕಾಗಿಹೋಗಿದೆ. ಅದರಲ್ಲಿ ಸಾಕಷ್ಟು ದುರುಪಯೋಗವಾಗಿದೆ ಎಂದು ನನ್ನ ಸ್ವಂತ ಅಭಿಪ್ರಾಯ. ಈಗ ಅದರ ವಿವರಣೆಯನ್ನು ತನಿಖೆ ಮಾಡಿನುತ್ತಿದ್ದೇನೆ. ಯಾರ್ಯಾರು ಎಷ್ಟೆಷ್ಟು ಕಾಲದಲ್ಲಿ ಎಷ್ಟೆಷ್ಟು ಹಣ ದುರುಪಯೋಗವಾಗಿದೆ ಎಂಬುದನ್ನು ವಿಚಾರಣೆ ಮಾಡಬೇಕು. ಉದಾಹರಣೆಗೆ ಖಾದಿ ತಯಾರು ಮಾಡತಕ್ಕ ಕಾಲದಲ್ಲಿ, ಸೊಸೈಟಿ ಮಾಡುವುದರಲ್ಲಿ ಮೊದಲಾದುವುಗಳಲ್ಲಿ ಯಾರು ಯಾರು ಯಾವಾಗ ಕೊಟ್ಟರು, ಬಿಟ್ಟರು ಎನ್ನತಕ್ಕಂಥದ್ದು ಸಾಕಷ್ಟು ಹೊರೆಯಾಗಿದೆ. ಅದನ್ನು ಹುಡುಕಿನುತ್ತಿದ್ದೇವೆ. ಅದಕ್ಕೆ ಸ್ವಲ್ಪ ಕಾಲಾವಧಿ ಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ಮುಖ್ಯ ಮಂತ್ರಿಯವರು ಹೇಳಿದರು, ಯಾರ್ಯಾರ ಮೇಲೆ ಏನಾದರೂ ಆಪಾದನೆ ಬಂದರೆ ಅದನ್ನು ನಾನು ವಿಚಾರ ಮಾಡಿನುತ್ತೇನೆಂದು. ತಮ್ಮ ಅಧಿಕಾರದ ಅವಧಿಯಲ್ಲಿ ಇವತ್ತಿನವರೆಗೆ ಯಾವ ಮಂತ್ರಿಗಳ ಮೇರಾಗಲ, ಬೋರ್ಡಿನ ಮೇರಾಗಲೆ ಆಪಾದನೆ ಮಾಡಿದ್ದು ತಮ್ಮ ಗಮನಕ್ಕೆ ಬಂದಿಲ್ಲವೆ ?

ಶ್ರೀ ಎಸ್. ನಿಜಲಿಂಗಪ.—ಖಾದಿ ಬೋರ್ಡಿನ ಮೇಲೆ ಬಂದದ್ದು ಅದು ಮಂತ್ರಿಗಳ ಮೇಲಿನ ವಿಚಾರವಲ್ಲ, ಅದು ಬೇರೆ ವಿಚಾರದಲ್ಲಿ. ಮಂತ್ರಿಗಳ ವಿಚಾರದಲ್ಲಿ ಇಲ್ಲಿ ಆಪಾದನೆಯನ್ನು ಮಾಡುತ್ತಾರೆ. ಇಲ್ಲಿಂದ ಹೊರಗಡೆ ಯಾರೂ ಮಾಡುತ್ತಿಲ್ಲ. ಇಲ್ಲಿ ಅಸೆಂಬ್ಲಿಯಲ್ಲಿ, ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಹೆಚ್ಚಾಗಿ ಹೇಳುತ್ತಿದ್ದಾರೆ. ಅದು ಇಂಥಿಂಥದ್ದು, ಎಂದು ಸ್ಪಷ್ಟವಾಗಿ ಇವತ್ತು ತಿಳಿಸಿದರೆ, ನಾನು ವಿಚಾರಣೆಮಾಡುತ್ತೇನೆ.

Bridge across Cauvery near Kerlapura

*Q.—59. Sri H. N. NANJEGOWDA (Arkalgud).—

Will the Minister for Public Works be pleased to state :—

(*a*) whether the work of the proposed bridge across the Cauvery River near Kerlapura in Arkalgud Taluk has been started ;

(*b*) whether the estimate and the blueprints for the above bridge has been sanctioned ;

(*c*) if so, for what amount ?

A. —Sri VEERENDRA PATIL (Minister for Public Works).—

(*a*) No.
(*b*) Yes.
(*c*) Rs. 11,74,000

ಶ್ರೀ ಎಚ್. ಎನ್. ನಂಜೇಗೌಡ.—ಇದರಲ್ಲಿ ಟೆಂಡರ್ ಕಾರ್‌ಫಾರ್ ಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಲೇಟೆಸ್ಟ್ ಇನ್‌ಫರ್ಮೇಷನ್ ನನ್ನಲ್ಲಿಲ್ಲ. ಆದರೆ ಟೆಂಡರ್ ಕಾರ್‌ಫಾರ್ ಮಾಡಲು ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಹೇಳಿದ್ದೇವೆ. ಟೆಂಡರ್ ಕೆಡ್ಯೂರ್ ತಯಾರು ಮಾಡಿದ್ದಾರೆ. ಬಹುಶಃ ಇಷ್ಟರಲ್ಲೇ ಕಾರ್‌ಫಾರ್ ಮಾಡಿರಬಹುದು ಎಂದು ತಿಳಿಯುತ್ತದೆ.

ಶ್ರೀ ಎಚ್. ಎನ್. ನಂಜೇಗೌಡ.—ಟೆಂಡರ್ ಡೇಟ್ ಎರಡು ದಿನ ಇಟ್ಟು ಯಾವುದೋ ಕಾರಣ ಗಳಿಗಾಗಿ, ದೊಡ್ಡವರ, ಮಂತ್ರಿಯವರ ಒತ್ತಡದಿಂದ ತೀರ್ಮಾನ ಮಾಡಿದೆ, ಹಾಗೆ ಹೆಂಡಿಂಗ್ ಇಟ್ಟಿರುವುದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್.—ಅದು ನನಗೆ ಅರ್ಥವಾಗಲಲ್ಲ. ಟೆಂಡರ್ ಕರೆಯುವುದಕ್ಕೆ ಪ್ರೊಸೀಜರ್ ಇದೆ. ಅದರ ಪ್ರಕಾರ ಟೆಂಡರ್ ಕರೆದಿದ್ದೇವೆ.

ಶ್ರೀ ಎಚ್. ಎನ್. ನಂಜೇಗೌಡ.—ಎರಡು ತಾರೀಖಿಗೆ ನಿಗಧಿ ಮಾಡಿದ್ದರು. ಆ ತಾರೀಖುಗಳಲ್ಲಿ ಯಾವುದೂ ತೀರ್ಮಾನವಾಗಲಿಲ್ಲವಂತೆ. ತಮ್ಮ ಅಪೇಕ್ಷೆಯಂತೆ ಕೆಲಸ ನಿಲ್ಲಿಸಿದ್ದಾರೆಂದು ತಿಳಿದುಬಂತು. ಇದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಈ ಕಾಮಗಾರಿ 11,74,000 ರೂಪಾಯಿಗಳಿದ್ದು. ದೊಡ್ಡ ಕೆಲಸ. ಸಾಕಷ್ಟು ಅನುಭವ ಮತ್ತು ಸಾಕಷ್ಟು ದುಡ್ಡು ಇರುವ ಕಂಟ್ರಾಕ್ಟರ್‌ಗೆ ಕೊಡಬೇಕು. ಇದುವರೆಗೆ ಅಂತಹವರು ಬಂದಿಲ್ಲದಿರಬಹುದು. ರೂಲ್ಸ್ ಪ್ರಕಾರ ಒಂದು ಸಾರಿ ಟೆಂಡರ್ ಕರೆಯುತ್ತಾರೆ. ನಿಗದಿಯಾದ ತಾರೀಖಿನೊಳಗೆ ಏನಾದರು ಟೆಂಡರ್‌ಗಳು ಬಂದರೆ, ಕಮ್ಮಿ ಕೊಟ್ಟವರು ಯಾವರಿಗೆ ಕೆಲಸ ಕೊಡುತ್ತಾರೆ. ಟೆಂಡರ್‌ಗಳು ಬರದಿದ್ದರೆ, ಮತ್ತೆ ಟೆಂಡರ್‌ಗಳನ್ನು ಕರೆಯುತ್ತಾರೆ.

ಶ್ರೀ ಎಸ್. ಗೋಪಾಲಗೌಡ.—ಅರಕಲಗೂಡು ತಾಲ್ಲೂಕಿನಲ್ಲಿರುವ ಕೇರಳಾಪುರದ ಬಳಿ ಕಾವೇರಿ ನದಿಗೆ ಅಡ್ಡರಾಗಿ ಸೇತುವೆ ಕಟ್ಟುವ ವಿಚಾರದಲ್ಲಿ ಈ ದಿನ ಪತ್ರಿಕೆಯಲ್ಲಿ ಬಂದಿದೆ. ಈ ವಿಚಾರದಲ್ಲಿ ಸಂಬಂಧಪಟ್ಟವರು ಮಾನ್ಯ ಮಂತ್ರಿಗಳ ಗಮನಕ್ಕೆ ಏನಾದರೂ ತಿಳಿಸಿದ್ದಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈ ಸೇತುವೆಗೆ ಅಡ್ಮಿನಿಸ್ಟ್ರೇಟಿವ್ ಅಪ್ರೂವರ್ ಕೊಟ್ಟಿದ್ದಾರೆ. ಮುಖ್ಯ ಮಂತ್ರಿಗಳಿಂದ ಟೆಕ್ನಿಕರ್ ಸ್ಯಾಂಕ್ಷನ್ ದೊರಕಿದೆ. ಇದು ಬಿಡ್ಡೆಡ್ ಕೆಲಸ. ಸೂಪರಿಂಟೆಂಡಿಂಗ್ ಇಂಜಿನಿಯರ್‌ಗೆ ಟೆಂಡರ್ ಕರೆಯುವುದಕ್ಕೆ ಹೇಳಿದ್ದಾರೆ. ನನ್ನಲ್ಲ ಇತ್ತೀಚಿನ ವರದಿ ಇಲ್ಲ. ಎರಡು ತಿಂಗಳ ಹಿಂದಿನ ವರದಿಯಂತೆ ಈ ಕೆಲಸಕ್ಕಾಗಿ ಟೆಂಡರ್ ಕರೆದಿರಬಹುದು.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಯಾರಾದರು ಬಂಡವಾಳ ಇಲ್ಲದವರು ಟೆಂಡರ್ ಹಾಕಿ ಬಿಡುತ್ತಾರೆ, ಅದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕಾಗುತ್ತದೆಂದು ಮಾನ್ಯ ಮಂತ್ರಿಗಳು ಹೇಳಿದರು. ಎ. ಬಿ. ಸಿ. ಮತ್ತು ಡಿ. ಎಂದು ನಾಲ್ಕು ಬಗೆಯ ಕಂಟ್ರಾಕ್ಟರ್‌ಗಳು ಇಲ್ಲವೆ ? ಶಕ್ತಿ ಇರುವವರು ಟೆಂಡರ್ ಹಾಕುತ್ತಾರೆ. ಅದರ ಪ್ರಕಾರ ಕೆಲಸ ಕೊಡುವುದಕ್ಕಾಗುವುದಿಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ಒಂದು ಪ್ರೊಸೀಜರ್ ಇದೆ. ಅದರ ಪ್ರಕಾರವೇ ಯಾರಿಗೆ ಸಾಧ್ಯವಿದೆಯೋ ಅವರು ಹಾಕುತ್ತಾರೆ. ಯಾರು ಕಡಿಮೆ ರೇಟ್ ಹಾಕಿರುತ್ತಾರೋ ಅವರಿಗೆ ಕೆಲಸ ಕೊಡುತ್ತಾರೆ.

ಶ್ರೀ ಎಸ್. ಶಿವಪ್ಪ.—ಟೆಂಡರ್ ಕರೆಯುವುದಕ್ಕೆ ತಡವಾಗಿರಲು ಕಾರಣವೇನು ? ಯಾರದೋ ಒತ್ತಡಕ್ಕೆ ಒಳಗಾಗಿ ನಿಧಾನ ಮಾಡಿದ್ದೀರಾ ? ಇದಕ್ಕೆ ಯಾರು ಕಾರಣ ಎಂಬುದನ್ನು ಹೇಳುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಜೆಂಡರನ್ನು ಜಾಗ್ರತೆ ಕರೆದು ಯಾರಿಗಾದರೂ ಕೊಟ್ಟರೂ ಸಹ ಮಾನ್ಯ ಸದಸ್ಯರುಗಳು ಅನುಮಾನ ಪಡುತ್ತಾರೆ. ನಿಧಾನ ಮಾಡಿದರೂ ಸಹ ಇದರಲ್ಲಿ ಏನೋ ಇದೆ ಎಂದು ಅನುಮಾನ ಪಡುತ್ತಾರೆ. ಟೆಂಡರ್ ಕರೆದ ಮೇಲೆ ಯಾರು ಕಡಿಮೆ ರೇಟ್ ಕೊಟ್ಟಿರುತ್ತಾರೋ ಅವರಿಗೆ ಕೊಡುತ್ತಾರೆ. ಅವರು ಕೊಟ್ಟಿರುವ ರೇಟ್‌ನಲ್ಲಿ ಏನಾದರೂ ಡಿಫೆಕ್ಟ್ ಇದೆಯೇ ಎಂದು ನೋಡಬೇಕಾಗುತ್ತದೆ. ಯಾರಾದರು ಹೆಚ್ಚಿನ ರೇಟನ್ನು ಹಾಕಿದ್ದರೆ, ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರು ಅದನ್ನು ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ರೆಫರ್ ಮಾಡುತ್ತಾರೆ. ಇವರು ಬೇಕಾದರೆ ಮತ್ತೆ ಚೀಫ್ ಇಂಜಿನಿಯರ್‌ಗೆ ರೆಫರ್ ಮಾಡಬಹುದು. ಪ್ರೊಸೀಜರ್ ಪ್ರಕಾರ ಕೆಲಸ ಮಾಡಬೇಕಾಗುತ್ತದೆ. ಮನಸ್ಸು ಬಂದಂತೆ ಕೆಲಸ ಮಾಡಿ ಎಂದು ಅವರಿಗೆ ಹೇಳುವುದಕ್ಕಾಗುವುದಿಲ್ಲ.

Sri S. SIVAPPA.—I want to know what is the procedure after tender date is over, and tenders have been called for and tenders have been tendered.

ಶ್ರೀ ವೀರೇಂದ್ರ ಪಾಟೀಲ್.—ಟೆಂಡರ್ ಕರೆದ ಮೇಲೆ, ಕೊನೆಯ ತಾರೀಖಿನ ದಿವಸ ಎಲ್ಲಾ ಟೆಂಡರ್‌ದಾರರ ಸಮಕ್ಷಮದಲ್ಲಿ ಟೆಂಡರ್‌ಗಳನ್ನು ಓಪನ್ ಮಾಡಬೇಕಾಗುತ್ತದೆ. ಎವರವಾಗಿ ಒಂದು ಸ್ಟೇಟ್‌ಮೆಂಟನ್ನು ತಯಾರ ಮಾಡಬೇಕಾಗುತ್ತದೆ. ಅದರಲ್ಲಿ ಏನಾದರೂ ಡಿಫೆಕ್ಟ್ ಇದ್ದರೆ, ಮೇಲಿನ ಅಧಿಕಾರಿಗೆ ರೆಫರ್ ಮಾಡುತ್ತಾರೆ. ಏನೂ ಡಿಫೆಕ್ಟ್ ಇಲ್ಲದಿದ್ದರೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರೇ ಕಮ್ಮಿ ರೇಟ್ ಇರುವ ಟೆಂಡರ್‌ದಾರನಿಗೆ ಕೆಲಸ ವಹಿಸುತ್ತಾರೆ. ಇದರ ಬಗ್ಗೆ ರೂಲ್ಸ್ ಇವೆ. ಅದನ್ನು ಮಾನ್ಯ ಸದಸ್ಯರು ಓದಬೇಕು.